# ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳ ವಿವರಗಳು

ವಿಶ್ವ ಬ್ಯಾಂಕ್ ಅನುದಾನಿತ - ಕೈಗಾರಿಕಾ ಮೌಲ್ಯ ವರ್ಧನೆಗೆ ಬಲಪಡಿಸುವ ಕೌಶಲ್ಯಗಳು (STRIVE) ಯೋಜನೆ
STRIVE ಕಾರ್ಯಕ್ರಮವು ವಿಶ್ವ ಬ್ಯಾಂಕ್ ಅನುದಾನಿತ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಇದರ ಮೂಲ ಉದ್ದೇಶ ಐ.ಟಿ.ಐ ಗಳು ಮತ್ತು ಶಿಶಿಕ್ಷು ತರಬೇತಿ ಮೂಲಕ ಒದಗಿಸಲಾದ ಕೌಶಲ್ಯ ತರಬೇತಿಯ ಪ್ರಸ್ತುತತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದಾಗಿರುತ್ತದೆ.

ಯೋಜನಾ ಅವಧಿ : 5 ವರ್ಷಗಳು
ಯೋಜನಾ ಮುಕ್ತಾಯ : ನವೆಂಬರ್ 2022
ಯೋಜನಾ ಮೊತ್ತದ ಪಾಲುದಾರಿಕೆ: 100% ಕೇಂದ್ರದ ಪಾಲು

STRIVE ಕಾರ್ಯಕ್ರಮವು ವಿಶ್ವ ಬ್ಯಾಂಕ್ನ ಫಲಿತಾಂಶ ಆಧಾರಿತ ಕಾರ್ಯಕ್ರಮ (ಪಿ 4 ಆರ್) ವಿಭಾಗದಡಿಯಲ್ಲಿ ಬರುತ್ತದೆ. ಅಂದರೆ, Disbursement Linked Indicators (DLIs) ಗಳ ಸಾಧನೆಯ ಆಧಾರದ ಮೇಲೆ ವಿಶ್ವ ಬ್ಯಾಂಕ್ ನಿಂದ ಅನುದಾನ ವಿತರಣೆ ಮಾಡಲಾಗುವುದು.

ಕಾರ್ಯಕ್ರಮದ ಫಲಿತಾಂಶವಾರು ವಿವರಗಳನ್ನು ಕೆಳಗೆ ನೀಡಲಾಗಿದೆ:

1) ಐಟಿಐಗಳ ಸುಧಾರಿತ ಸಾಧನೆ: ಕೈಗಾರಿಕಾ ತರಬೇತಿ ಸಂಸ್ಥೆಗಳು MIS-NCVT ಪೋರ್ಟಲ್ ಸ್ವಯಂ ರೇಟಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಾಗಿದೆ. ಐಟಿಐಗಳು 2 ಕ್ಕಿಂತ ಹೆಚ್ಚಿನ ಗ್ರೇಡಿಂಗ್ ಇದ್ದಲ್ಲಿ ಮಾತ್ರ STRIVE ಅನುಷ್ಠಾನಕ್ಕೆ ಸಂಬಂಧಿಸಿದಂತೆ Institute Strategic Plan(ISP) ಅನ್ನು ಭರ್ತಿಮಾಡಲು ಅರ್ಹವಾಗುತ್ತವೆ. ಸಂಸ್ಥೆಗಳು ಸಲ್ಲಿಸಿದ ISP ಯ ಆಧಾರದ ಮೇಲೆ, ಐಟಿಐಗಳನ್ನು ಡಿ.ಜಿ.ಟಿ ನವ ದೆಹಲಿ ಇವರು ಅನುದಾನ ಬಿಡುಗಡೆಗೆ ಆಯ್ಕೆ ಮಾಡುತ್ತಾರೆ. ಈ ಫಲಿತಾಂಶ ಕ್ಷೇತ್ರದಡಿಯಲ್ಲಿ ಒಟ್ಟು 22 ಸಂಸ್ಥೆಗಳನ್ನು (21 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಳು & 1 ಖಾಸಗಿ ಸಂಸ್ಥೆ) ಹಂತ ಹಂತವಾಗಿ ಆಯ್ಕೆ ಮಾಡಲಾಗಿದೆ. ಒಟ್ಟ ಯೋಜನಾ ಮೊತ್ತ ರೂ3257.25 ಲಕ್ಷಗಳಾಗಿರುತ್ತದೆ.

2) ಐಟಿಐಗಳು ಮತ್ತು ಶಿಶಿಕ್ಷು ತರಬೇತಿಗಳ ಸಾಮರ್ಥ್ಯಗಳನ್ನು ಹೆಚ್ಚಿಸುವುದು: ಈ ಫಲಿತಾಂಶ ಕ್ಷೇತ್ರದಲ್ಲಿ ಐಟಿಐಗಳು ಮತ್ತು ಶಿಶಿಕ್ಷು ವೃತ್ತಿಯ ಒಟ್ಟಾರೆ ಪರಿಸರವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ನೀತಿ ಮತ್ತು ನಿಯಂತ್ರಕ ಸುಧಾರಣೆಗಳಿಗೆ ರಾಜ್ಯ ಸರ್ಕಾರಗಳು ಉತ್ತೇಜನ ನೀಡಲಾಗುವುದು. ಒಟ್ಟು ಯೋಜನಾ ಮೊತ್ತ ರೂ1750ಲಕ್ಷಗಳು.

3) ಬೋಧನೆ ಮತ್ತು ಕಲಿಕೆ ಸುಧಾರಣೆ: ಈ ಫಲಿತಾಂಶ ಕ್ಷೇತ್ರವು ಡಿಜಿಟಿ ಅಡಿಯಲ್ಲಿ ವೃತ್ತಿಪರ ತರಬೇತಿ ಸಂಸ್ಥೆಗಳ ಸುಧಾರಣೆಗೆ ಪೂರಕವಾದ ಚಟುವಟಿಕೆಗಳನ್ನು ಒಳಗೊಂಡಿದೆ.

4) ಸುಧಾರಿತ ಮತ್ತು ವಿಸ್ತಾರವಾದ ಶಿಶಿಕ್ಷು ತರಬೇತಿ: ಈ ಯೋಜನೆಯು ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು (ಎಸ್.ಎಂ.ಇ) ಗಳಲ್ಲಿ ವ್ಯವಹಾರ ಸಂಘ/ ಇಂಡಸ್ಟ್ರಿ ಕ್ಲಸ್ಟರ್ಸ್ ಗಳ ಮೂಲಕ ಶಿಶಿಕ್ಷು ತರಬೇತಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುತ್ತದೆ. ಈ ಫಲಿತಾಂಶ ಕ್ಷೇತ್ರದ ಅಡಿಯಲ್ಲಿ Industry Apprenticeship Initiatives ಗಳು ಸದಸ್ಯ ಸಂಸ್ಥೆಗಳ ಮೂಲಕ ಶಿಶಿಕ್ಷು ವೃತ್ತಿಯನ್ನು ಪ್ರೋತ್ಸಾಹಿಸಲು ಇಂಡಸ್ಟ್ರಿ ಕ್ಲಸ್ಟರ್ಸ್ ಗಳ ಸಾಮರ್ಥ್ಯವನ್ನು ಬಲಪಡಿಸುತ್ತದೆ. ಮತ್ತು ಶಿಶಿಕ್ಷು ವೃತ್ತಿಯ ಪ್ರಕ್ರಿಯೆಯಲ್ಲಿ ತರಬೇತಿದಾರರ ಗುರುತಿಸುವಿಕೆ, ಮೌಲ್ಯಮಾಪನ, ಪ್ರಮಾಣೀಕರಣ ಮತ್ತು ತರಬೇತಿಯ ಅಂತ್ಯದಲ್ಲಿ ಉದ್ಯೋಗ ಪಡೆಯಲು ಸಹಾಯವನ್ನು ಒದಗಿಸುವದನ್ನು ನಿರ್ವಹಿಸುವಲ್ಲಿ ಸಹಾಯ ಮಾಡಲಾಗುವುದು. ಈ ಫಲಿತಾಂಶ ಕ್ಷೇತ್ರದಡಿಯಲ್ಲಿ ರಾಜ್ಯದಿಂದ ಒಟ್ಟು 4 ಐ.ಸಿ ಗಳು ಆಯ್ಕೆಯಾಗಿರುತ್ತವೆ. ಒಟ್ಟು ಯೋಜನಾ ಮೊತ್ತ ರೂ400ಲಕ್ಷಗಳು.

**DETAILS OF GOVERNMENT & PRIVATE ITIs SELECTED FOR IMPLEMENTATION OF STRIVE PROJECT**

| S. No. | ITI Code - Selected under STRVE | Name of ITI Selected under STRVE |
|---|---|---|
| **STRIVE PHASE-1** | | |
| 1 | GR29000472 | GITI Bilagi |
| 2 | GU29000242 | GITI(W) Bagalkot |
| 3 | GU29000214 | GITI(W) Hosur Road |
| 4 | GU29000045 | GITI(M) Belgaum |
| 5 | GU29000154 | GITI(W) Belgaum |
| 6 | GR29000206 | GITI(W) Gundlupet |
| 7 | GR29000925 | GITI Beguru |
| 8 | GU29000065 | GITI Chikmagalur |
| 9 | GU29000044 | GITI(M) Mangalore |
| 10 | GU29000255 | GITI(W) Mangalore |
| 11 | PR29000170 | Sri Dharmasthala Manjunatheshwara ITI |
| 12 | GR29000211 | GITI Kukanoor |
| 13 | GU29000066 | GITI Mandya |
| 14 | GU29000317 | GITI Pandavapura |
| 15 | GU29000158 | GITI Malavalli |
| 16 | GR29000400 | GITI Maddur |
| 17 | GR29000470 | GITI H.D. Kote |
| 18 | GU29000053 | GITI Mysore-07 |
| 19 | GR29000226 | GITI(W) Tiptur |
| 20 | GU29000428 | GITI Udupi |
| **STRIVE PHASE-2** | | |
| 21 | GR29000231 | GITI (W) Chitradurga |
| 22 | GU29000050 | GITI Hassan |

**DETAILS OF INDUSTRY CLUSTERS SELECTED FROM STATE**

| S.No. | Full Name |
|---|---|
| 1 | ELCIA, Bengaluru |
| 2 | Kanara Industries Association, DK |
| 3 | Auto Cluster Bidar, Bidar |
| 4 | Simha Shakti Okkuta, Sirsi |

**ಕೇಂದ್ರ ಪುರಸ್ಕೃತ ಯೋಜನೆ - ಹಾಲಿ ಇರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮಾದರಿ ಸಂಸ್ಥೆಗಳನ್ನಾಗಿ ಉನ್ನತೀಕರಿಸುವುದು (ಮಾಡಲ್ ಐಟಿಐ)**

**ಮಾಡಲ್ ಐಟಿಐ ನ ಉದ್ದೇಶ :**

- ಇತರ ಐಟಿಐಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸುವ ಮತ್ತು ಐಟಿಐ ಶಿಕ್ಷಣದ ಘನತೆಯನ್ನು ಹೆಚ್ಚಿಸುವ ಮಾನದಂಡವನ್ನು ಅಭಿವೃದ್ಧಿಪಡಿಸುವುದು ಮುಖ್ಯ ಉದ್ದೇಶವಾಗಿದೆ.
- ಸ್ಥಳೀಯ ಉದ್ಯಮಗಳಿಗೆ ಪರಿಣಿತ ಮತ್ತು ಉತ್ತಮ ತರಬೇತಿನೀಡುವ ಬೇಡಿಕೆ ಕೇಂದ್ರವಾಗುವುದು.
- ಸ್ಥಳೀಯ ಕೈಗಾರಿಕೆಗಳೊಂದಿಗೆ ಉತ್ತಮ ತೊಡಗಿಸಿಕೊಳ್ಳುವಿಕೆ.
- ಷಿಫ್ಟ್ ಗಳಲ್ಲಿ ತರಬೇತಿ ನಡೆಸುವ ಮೂಲಕ ಸಾಮರ್ಥ್ಯದ ಅತ್ಯುತ್ತಮ ಬಳಕೆ
- ಅಸಂಘಟಿತ ವಲಯ ಕಾರ್ಮಿಕರ ತರಬೇತಿ.
- ಉದ್ದಿಮೆಗಳಲ್ಲಿ ಅಸ್ತಿತ್ವದಲ್ಲಿರುವ ಕಾರ್ಮಿಕ ಶಕ್ತಿಯು ಈ ಮಾದರಿ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತದೆ.
- ಮಾಡಲ್ ಐ.ಟಿ.ಐ ಗಳಲ್ಲಿ ಕೈಗೊಳ್ಳಲಾಗಿರುವ ಕ್ರಮಗಳನ್ನು ರಾಜ್ಯದ ಇತರೆ ಐಟಿಐಗಳಲ್ಲಿಯೂ ಸಹ ಅಳವಡಿಸಲು ಸಾಧ್ಯವಾಗುತ್ತದೆ.

ವಿನ್ಯಾಸ ಮತ್ತು ವ್ಯಾಪ್ತಿ:

- ಉದ್ಯೋಗಿ ಪ್ರವೇಶದಾರರಿಗೆ, ಅಸ್ತಿತ್ವದಲ್ಲಿರುವ ಕಾರ್ಮಿಕರಿಗೆ ಮತ್ತು ಅಸಂಘಟಿತ ಕಾರ್ಮಿಕರಿಗೆ ಅಸ್ತಿತ್ವದಲ್ಲಿರುವ ವೃತ್ತಿಗಳಲ್ಲಿ (ನಿಗಧಿಪಡಿಸಿರುವ ಮಾನದಂಡಗಳಿಗೆ ಉನ್ನತೀಕರಿಸಿ), ಹೊಸ ವೃತ್ತಿಗಳಲ್ಲಿ ಮತ್ತು ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಲ್ಲಿ ಕಸ್ಟಮೈಸ್ಡ್ ಕೌಶಲ್ಯ ತರಬೇತಿ ನೀಡುವುದು
- ಕೈಗಾರಿಕೆಗಳೊಂದಿಗೆ Flexi MoU ಗಳನ್ನು ಮಾಡಿಕೊಳ್ಳುವುದು
- ಪ್ಲೇಸ್ಮೆಂಟ್ ಸೆಲ್ ಅನ್ನು ಬಲಪಡಿಸುವುದು.

ಐಎಂಸಿ ಸೊಸೈಟಿಯ ಸಂವಿಧಾನ :

- Upgradation of 1396 Government ITIs through Public Private Partnership(PPP) ಯೋಜನೆ ಮಾದರಿಯಲ್ಲಿ ಸಂಸ್ಥೆಯ ನಿರ್ವಹಣೆ ಸಮಿತಿ (ಐಎಂಸಿ) ರಚಿಸಲಾಗಿದೆ.
- ರಾಜ್ಯವು ಐ.ಎಂ.ಸಿ ಯ ಸಂಯೋಜನೆ ಮತ್ತು ಕೆಲಸವನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ಪ್ರಮುಖ ವೃತ್ತಿಗಳನ್ನು ಆವರಿಸಿಕೊಳ್ಳುವಂತೆ ಉದ್ಯಮದ ಪ್ರತಿನಿಧಿಗಳನ್ನು ಐ.ಎಂ.ಸಿ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು.
- ಯೋಜನಾ ಮೊತ್ತದ ಪಾಲುದಾರಿಕೆ : ಕೇಂದ್ರದ ಪಾಲು: ರಾಜ್ಯದ ಪಾಲು = 70:30

ಕೈಗಾರಿಕಾ ತರಬೇತಿ ಸಂಸ್ಥೆಯ ಹೆಸರು: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಪು), ಹೊಸೂರು ರಸ್ತೆ, ಬೆಂಗಳೂರು-29
ಯೋಜನಾ ಮೊತ್ತ : ರೂ1000ಲಕ್ಷಗಳು
ಯೋಜನೆ ಅನುಷ್ಠಾನಗೊಳಿಸಿದ ವರ್ಷ : 2015-16

ಈ ಸಂಸ್ಥೆಯು ರಾಜ್ಯದಲ್ಲಿ ಸ್ಥಾಪಿತವಾದ ಅತ್ಯಂತ ಹಳೆಯ ಐಟಿಐಗಳಲ್ಲಿ ಒಂದಾಗಿದೆ. ಇದನ್ನು 1952 ರಲ್ಲಿ ಸ್ಥಾಪಿಸಲಾಯಿತು. ಸದರಿ ಸಂಸ್ಥೆಯ ವಾರ್ಷಿಕ ಪ್ರವೇಶನಾ ಸಾಮರ್ಥ್ಯ 1835 ತರಬೇತಿದಾರರಾಗಿದ್ದು, ಈ ಪೈಕಿ ಸೆಂಟರ್ ಆಫ್ ಎಕ್ಸಲೆನ್ಸ್ ನ ಎಲೆಕ್ಟ್ರಿಕಲ್ ಸೆಕ್ಟರ್ ಸೇರಿರುತ್ತದೆ. ಐಟಿಐಯಲ್ಲಿ ಒಟ್ಟು 25 ಟ್ರೇಡ್ಗಳನ್ನು ಅಳವಡಿಸಲಾಗಿದೆ. ಸುಧಾರಿತ ವೊಕೇಶನಲ್ ತರಬೇತಿ ಯೋಜನೆ ಮತ್ತು ಮೋಟಾರು ಚಾಲಕ ತರಬೇತಿ ಶಾಲೆಗಳನ್ನು ಹೊಂದಿರುವ ಈ ಸಂಸ್ಥೆಯು ಸಾಮಾಜಿಕವಾಗಿ ಅನಾನುಕೂಲಕ ಜನರಿಗೆ ಮೂರನೇ ಶಿಫ್ಟ್ ನಲ್ಲಿ ತರಬೇತಿಯನ್ನು ನೀಡಲು ಮತ್ತು ಮಾಡ್ಯುಲರ್ ಉದ್ಯೋಗಿ ಕೌಶಲಗಳನ್ನು ಒದಗಿಸುತ್ತಿದೆ.

ಪ್ರಮುಖ ಕೈಗಾರಿಕಾ ಕೇಂದ್ರದಿಂದ ಅಂದರೆ, ಎಲೆಕ್ಟ್ರಾನಿಕ್ಸ್ ನಗರ ಮತ್ತು ಐಟಿ ಕಾರಿಡಾರ್‌ನಿಂದ ಹತ್ತಿರದಲ್ಲಿದ್ದು ಸದರಿ ಸಂಸ್ಥೆಯು ಆಟೋಮೊಬೈಲ್ ಮತ್ತು ಎಲೆಕ್ಟ್ರಿಕಲ್ ವಲಯವನ್ನು ತೆಗೆದುಕೊಳ್ಳಲು ಸೂಕ್ತವಾಗಿದೆ ಮತ್ತು ಐಟಿಐ ಅನ್ನು ಮಾಡಲ್ ಐಟಿಐ ಎಂದು ಅಭಿವೃದ್ಧಿಪಡಿಸಲು ಸೂಕ್ತವಾಗಿದೆ.

- ಮಾದರಿ ಐಟಿಐ-ಹೊಸೂರು ರಸ್ತೆ(ಪು) ಐಎಸ್‌ಒ 29990: 2010 ಪ್ರಮಾಣಪತ್ರವನ್ನು ಪಡೆದಿದೆ.
- ಯೋಜನೆಯ ಅವಧಿಯನ್ನು ಮಾರ್ಚ್ -2022 ರವರೆಗೆ ಡಿ.ಜಿ.ಟಿ., ನವದೆಹಲಿ ರವರು ವಿಸ್ತರಿಸಿರುತ್ತಾರೆ.

ಕೈಗಾರಿಕಾ ತರಬೇತಿ ಸಂಸ್ಥೆಯ ಹೆಸರು: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ **ಹೊನ್ನಾವರ**
ಯೋಜನಾ ಮೊತ್ತ : ರೂ500ಲಕ್ಷಗಳು
ಯೋಜನೆ ಅನುಷ್ಠಾನಗೊಳಿಸಿದ ವರ್ಷ : 2018-19

- ಡಿಸೆಂಬರ್-2018 ರಲ್ಲಿ ಕೇಂದ್ರದ ಪಾಲಿನ ರೂ175ಲಕ್ಷಗಳನ್ನು  ರಾಜ್ಯಕ್ಕೆ ಬಿಡುಗಡೆ ಮಾಡಲಾಗಿದೆ.
- ಮಾಡಲ್ ಐ.ಟಿ.ಐ ಕಾರ್ಯಕ್ರಮದ ಅಡಿಯಲ್ಲಿ ಉನ್ನತೀಕರಣಕ್ಕಾಗಿ ಈ ವರೆಗೆ ಕೇಂದ್ರ ಮತ್ತು ರಾಜ್ಯದ ಪಾಲಿನ ಮೊತ್ತ ಸೇರಿದಂತೆ ಒಟ್ಟು ರೂ223ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಡಿಜಿಟಿ ವೆಬ್ ಸೈಟ್ ನಿಂದ ಪಡೆಯಬಹುದು: https://dgt.gov.in/MODEL_ITI